Collection of Taxes of V.P. in the year 1979-80

536 SRI JAYADEVARAJ URS (Chamundeswari).—Will the Minister for Rural Development and Panchayath Raj be pleased to state—.

(*a*) the total collection of taxes of V.P. in the year 1979-80;

(*b*) the total amount allotted for giving the matching grants to VPs?

SRI B. RAMAIAH (Minister for Rural Development and Panchayat Raj.).—

(*a*) Rs. 2,58,62,720 upto 31-3-1980.

(*b*) Rs. 50 lakhs.

ಶ್ರೀ ಜಯದೇವರಾಜ ಅರಸ್.—ಈ ಬಗ್ಗೆ ೧೯೭೯ನೇ ನವೆಂಬರ್ ೭೦ ರಂದು ಸರ್ಕಾರದ ಪ್ರೊಸೀಡಿಂಗ್ಸ್ ಆಗಿದೆ ಅದಕ್ಕನುಗುಣವಾಗಿ. ೨ ಕೋಟಿ ೫೮ ಲಕ್ಷ ರೂಪಾಯಿ ವಸೂಲಾಗಿದ್ದರೆ ೫೦ ಲಕ್ಷ ರೂಪಾಯಿ ಮಾತ್ರ ತಾವು ಮ್ಯಾಚಿಂಗ್ ಗ್ರಾಂಟ್ ಎಂದು ಕೊಟ್ಟಿದ್ದೀರಿ. ಇದು ಆ ತತ್ವಕ್ಕನುಗುಣವಾಗಿ ಆಗಿದೆಯೆ ?

† ಶ್ರೀ ಬೇಗಾನೆ ರಾಮಯ್ಯ.—ಮಾನ್ಯ ಸದಸ್ಯರು ಹೇಳಿದ ಹಾಗೆ ೨ ಕೋಟಿ ಚಿಲ್ಲರೆ ರೂಪಾಯಿ ವಸೂಲಾಗಿರುವುದು ನಿಜ ೫೦ ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಿರುವುದು ಯಾವ ಆಧಾರದ ಮೇಲೆ ಎಂದರೆ. ಏಪ್ರಿಲ್‌ನಿಂದ ಡಿಸೆಂಬರ್‌ವರೆಗೆ ಎಷ್ಟು ವಸೂಲಾಗಬಹುದೆಂಬ ಒಂದು ಅಂದಾಜನ್ನು ಇಟ್ಟುಕೊಂಡು ೫೦ ಲಕ್ಷ ರೂಪಾಯಿ ಮ್ಯಾಚಿಂಗ್ ಗ್ರಾಂಟ್ ಕೊಟ್ಟಿದ್ದೇವೆ. ೨ ಕೋಟಿಗೆ ಸಮಾನ ವಾಗಿ ೨ ಕೋಟಿಯನ್ನು ಕೊಡತಕ್ಕ ನೀತಿ ಇಲ್ಲ. ೩ ಕ್ವಾರ್ಟರ್ಸ್‌ಗೆ ಸಂಬಂಧಪಟ್ಟ ಹಾಗೆ ೫೦ ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದೇವೆ. ಈ ಸಾರಿ ಕೂಡ ಮ್ಯಾಚಿಂಗ್ ಗ್ರಾಂಟ್ ಕೊಡಬೇಕೆಂದು ಮಾಡಿದ್ದೇವೆ. ಇದರ ಜೊತೆಗೆ ಉತ್ಪಾದನಾ ಧನಸಹಾಯ ಕೊಡತಕ್ಕ ವ್ಯವಸ್ಥೆಯನ್ನು ಇತ್ತೀಚೆಗೆ ಮಾಡಿ ಕೊಂಡು ಬಂದೆವು. ಹಿಂದೆ ೧೫ನೆ ಹಣಕಾಸಿನಲ್ಲಿ ಕೊಡಬೇಕೆಂದು ಒಂದು ತೀರ್ಮಾನವನ್ನು ಕೈಗೊಂಡಿದ್ದೇವು. ೫.೪೭.೧೦.೫೯೪-೭೪ ರೂಪಾಯಿ ಬರಬೇಕಾದ್ದರಲ್ಲಿ ಇವತ್ತಿನವರೆಗೂ ಆಗಿತಕ್ಕ ಕಲೆಕ್ಷನ್ ಎಷ್ಟಿದೆ ಎಂದರೆ. ರೂಪಾಯಿ ೧.೨೬.೪೮೨೯೫. ಬರಬೇಕಾದ ಬಾಕಿ ರೂ. ೩.೬೯.೬೩.೯೧೧-೬೧ ಪೈಸೆ. ಇದನ್ನು ಗಮನದಲ್ಲಿಟ್ಟುಕೊಂಡು ನಾವು ಇತ್ತೀಚೆಗೆ ಪಂಚಾಯಿತಿಗೆ ಒಂದು ಆದೇಶ ಕೊಟ್ಟಿದ್ದೇವೆ. ನೀವು ಇದೇ ರೀತಿಯಲ್ಲಿ ವಸೂಲು ಮಾಡಿದರೆ ಆಗುವುದಿಲ್ಲ. ೫೦ ಪರ್ಸೆಂಟಿಗಿಂತ ಜಾಸ್ತಿ ಯಾರು ವಸೂಲು ಮಾಡುತ್ತೀರಿ ಅಂಥವರಿಗೆ ಇಷ್ಟು ಮ್ಯಾಚಿಂಗ್ ಗ್ರಾಂಟ್ ಕೊಡುತ್ತೇವೆಂದು ಹೇಳಿದ್ದೇವೆ. ಆದಕ್ಕಿಂತ ಒಳಗೆ ವಸೂಲಿ ಮಾಡಿದವರಿಗೆ ಎಷ್ಟು ಕೊಡಬೇಕೆಂಬುದನ್ನು ಜಿಲ್ಲಾಧಿಕಾರಿಗಳ ತೀರ್ಮಾನಕ್ಕೆ ಬಿಟ್ಟಿದ್ದೇವೆ. ೫೫ ಪರ್ಸೆಂಟ್‌ಗಿಂತ ಕಡಿಮೆ ವಸೂಲು ಮಾಡತಕ್ಕವರಿಗೆ ಮ್ಯಾಚಿಂಗ್ ಗ್ರಾಂಟ್ ಕೊಡುವುದಿಲ್ಲ ಎಂದು ಹೇಳಿದ್ದೇವೆ. ಕಾರಣ ಇಷ್ಟೆ. ಉತ್ಪಾದನಾ ಇದ್ದರೆ ಆಸಕ್ತಿಯಿಂದ ಜನ ನ್ನಾಗಿ ಕೆಲಸ ಮಾಡುತ್ತಾರೆ. ಇಲ್ಲದಿದ್ದರೆ ಬರುವುದು ಬರುತ್ತದೆ. ನಾವು ಮಾಡುವುದನ್ನು ಮಾಡೋಣ ಎಂಬ ದೃಷ್ಟಿಯಿಂದ ಕೆಲಸ ಮಾಡುತ್ತಾರೆ ಎಂಬುದನ್ನು ಗಮನದಲ್ಲಿಟ್ಟುಕೊಂಡು ಹೀಗೆ ಮಾಡಿದ್ದೇವೆ. ಪಂಚಾಯಿತಿಗಳಿಗೆ ನಿಜವಾಗಿ ಸಹಾಯ ಮಾಡುವ ಆಸಕ್ತಿ ಸಂಪೂರ್ಣವಾಗಿ ಸರ್ಕಾರ ಕ್ಕಿದೆ. ವಸೂಲಾತಿಯನ್ನು ಅನುಸರಿಸಿ ಹಣ ಕೊಡುತ್ತಿದ್ದೇವೆ.

ಶ್ರೀ ಡಿ. ಜಯದೇವರಾಜ ಅರಸ್.—ಈ ಬಂದು ಪ್ರಿಯೊಯಲ್‌ನಲ್ಲಿ ತಾವು ಹೇಳುತ್ತೀರಿ, "with reference to the State Level Conference...requesting per capita of Rs. 3/- for village panchayats and Rs. 2/- for Taluk Development Boards works, the Government were pleased to send the government concerned recommendation made in the conference mention to aboyec

pleased to sanction matching grants to the institutions." ಈ ಪ್ರಯತ್ನ, ಬಲ ಇಟ್ಟುಕೊಂಡು ಯೋಚನೆ ಮಾಡಬೇಕು. ಮೊದಲು ರೆವಿನ್ಯೂ ಗ್ರ್ಯಾಂಟ್ ಕೊಡುವ ಪದ್ಧತಿಯನ್ನು ೧೯೬೪-೬೫ರಲ್ಲಿ ತಂದಾಗ ಕರ್ನಾಟಕ ಪ್ರದೇಶದಲ್ಲಿ ೧೬ ಕೋಟಿ ರೂಪಾಯಿ ರೆವಿನ್ಯೂ ಕಲೆಕ್ಷನ್ ಇತ್ತು. ಇವತ್ತು ಇದ್ದ ಪರಿಸ್ಥಿತಿ ಇರಲಿಲ್ಲ. ಇವತ್ತು ನಾನಾ ಕಾರಣದಿಂದ ಮೂರೂವರೆ ಕೋಟಿ ರೂಪಾಯಿಗೆ ಇಳಿದಿದೆ. ಆ ದೃಷ್ಟಿಯಿಂದ ಲೆಕ್ಕ ಹಾಕಿದರೆ ಒಂದು ಗ್ರಾಮ ಪಂಚಾಯಿತಿ ಮೈಂಟೆನೆನ್ಸ್ ಹೇಗೆ ಮಾಡಬೇಕು ಎಂಬುದನ್ನು ಮುಖ್ಯವಾಗಿ ನೋಡಬೇಕಾಗುತ್ತದೆ. ವಸೂಲು ಮಾಡುವುದು ಮುಖ್ಯ, ೨೫ ಪರ್ಸೆಂಟ್‌ಗಿಂತ ಕಡಿಮೆ ವಸೂಲು ಮಾಡಬಾರದು ಎಂದು ತಾವು ಹೇಳುವುದನ್ನು ನಾನು ಒಪ್ಪುತ್ತೇನೆ. ಉದಾಹರಣೆಗೆ ೫೦ ಸಾವಿರ ರೂಪಾಯಿ ಬಾಕಿ ಇದ್ದು ೨೫ ಸಾವಿರ ರೂಪಾಯಿ ವಸೂಲಾಗದೇ ೨೪ ಸಾವಿರ ರೂಪಾಯಿ ವಸೂಲು ಮಾಡಿದಾಗ ಏನು ಮಾಡುತ್ತೀರಿ? ಕೇವಲ ಒಂದು ಸಾವಿರ ರೂಪಾಯಿ ಕಡಿಮೆ ಯಾದರೂ ಕೊಡುವುದಿಲ್ಲ ಎಂದ ಹಾಗಾಯಿತು. ಈ ರೀತಿ ಆದಾಗ ಏನು ಮಾಡುತ್ತೀರಿ? ಈಗ ವಸೂಲಿಗೆ ಕಾರಣರು ಯಾರು? ಪಂಚಾಯಿತಿಯವರು ನೇರವಾಗಿ ಕಾರಣರಲ್ಲ ರೆವಿನ್ಯೂ ಇಲಾಖೆ ಯವರು ವಸೂಲು ಮಾಡುತ್ತಾರೆ, ಪಂಚಾಯಿತಿಯವರು ಮಾಡುವುದಿಲ್ಲ. ವಿಲೇಜ್ ಅಕೌಂಟೆಂಟ್ ಎಷ್ಟು ಮಟ್ಟಿಗೆ ಕೆಲಸ ಮಾಡುತ್ತಾನೆ ಎಂಬುದು ಎಲ್ಲರಿಗೂ ಗೊತ್ತಿದೆ. ಇಂಥ ಸಂದರ್ಭದಲ್ಲಿ ಹೀಗೆ ಕಡಿತ ಮಾಡುವುದರಿಂದ ಪಂಚಾಯಿತಿಗಳು ಕೆಲಸ ಮಾಡುವುದು ಕಷ್ಟವಾಗುತ್ತದೆ. ಆದ್ದರಿಂದ ದಯವಿಟ್ಟು ಸರ್ಕಾರದವರು ಈ ಆಜ್ಞೆಯನ್ನು ಪುನರ್‌ಪರಿಶೀಲನೆ ಮಾಡಿ ಅವರಿಗೆ ಇನ್‌ಸೆಂಟೀವ್ ಕೊಡುವ ವ್ಯವಸ್ಥೆ ಮಾಡಬೇಕು. ತಮ್ಮ ಸರ್ಕ್ಯುಲರ್‌ನಲ್ಲಿರುವುದನ್ನು ಕಿತ್ತು ಹಾಕಿ ಮೊದಲು ಯಾವ ರೀತಿ ಇತ್ತೋ ಅದೇ ರೀತಿ ಮಾಡಿ ಪಂಚಾಯಿತಿಗಳಿಗೆ ಅನುಕೂಲವಾಗುವಂತೆ ಮಾಡುತ್ತೀರಾ?

ಶ್ರೀ ಬೇಗಾನೆ ರಾಮಯ್ಯ.—ಮಾನ್ಯ ಸದಸ್ಯರು ಹೇಳಿದಂತೆ ತಹಸೀಲ್ದಾರರಿಗೆ ವಸೂಲು ಮಾಡುವ ಅಧಿಕಾರವನ್ನು ಕಳೆದ ಶಾಸನದಲ್ಲಿ ತಿದ್ದುಪಡಿ ಮುಖಾಂತರ ಕೊಟ್ಟಿದ್ದೇವೆ, ವಿಲೇಜ್ ಅಕೌಂಟೆಂಟಿಗೆ ಆದೇಶ ಕೊಟ್ಟು ವಸೂಲು ಸರಿಯಾಗಿ ಮಾಡಬೇಕೆಂದು ತಿಳಿಸಿದ್ದೇವೆ. ಈಗಾಗಲೇ ವಸೂಲಾತಿ ಕ್ರಮ ನಡೆಯುತ್ತಿದೆ, ಸ್ವಾಭಾವಿಕವಾಗಿ ವಸೂಲಾತಿ ೫೦ ಪರ್ಸೆಂಟಿಗಿಂತ ಹೆಚ್ಚು ಮುಟ್ಟಲೇ ಬೇಕು. ಮುಟ್ಟಿದಾಗ ಈ ಸಮಸ್ಯೆ ಉದ್ಭವವಾಗುವುದಿಲ್ಲ.

ಶ್ರೀ ಕೆ. ಬಿ. ಶಿವಯ್ಯ.—ಮಾನ್ಯ ಮಂತ್ರಿಗಳು ಮಲೆನಾಡಿನ ಭಾಷೆಯಲ್ಲಿ ವ್ಯಾಕರಣ ಬದ್ಧವಾಗಿ ಭಾಷಣ ಮಾಡುವ ರೀತಿಯಲ್ಲಿ ಉತ್ತರ ಹೇಳಿದರು. ಕಲೆಕ್ಷನ್ ಸರಿಯಾಗಿ ಆದರೆ ಇನ್‌ಸೆಂಟೀವ್ ಕೊಡುವ ರೀತಿಯಲ್ಲಿ ಸರ್ಕಾರ ಹೊಸ ನೀತಿ ಹಾಕಿ ಪಂಚಾಯಿತಿಗಳನ್ನು ಉದ್ಧಾರ ಮಾಡುತ್ತೇವೆ ಎಂದು ಹೇಳಿದ್ದಾರೆ ದಯಮಾಡಿ ವಸೂಲು ಮಾಡುವವರು ಯಾರು ಎಂಬುದನ್ನು ನೋಡಿ. ಇನ್‌ಸೆಂಟೀವ್ ರೂಪದಲ್ಲಿ ಪಂಚಾಯಿತಿಗಳನ್ನು ಕೊಂದುಹಾಕ್ತೀರಿ. ಪಂಚಾಯಿತಿ ವ್ಯವಸ್ಥೆಯನ್ನು ಹಾಳು ಮಾಡುತ್ತೀರಿ. ಮೊದಲು ಸರ್ಕಾರ ಯಾವ ರೀತಿ ಒಂದು ಒಳ್ಳೆಯ ಉದ್ದೇಶವನ್ನು ಇಟ್ಟುಕೊಂಡು ಪಂಚಾಯಿತಿಗಳಿಗೆ ವ್ಯವಸ್ಥಿತ ರೀತಿಯಲ್ಲಿ ಸಹಾಯ ಮಾಡಿ ಒಳ್ಳೆಯ ರೂಪವನ್ನು ಕೊಡುವುದಕ್ಕೆ ಪ್ರಯತ್ನ ಮಾಡಿದ್ದರೋ ಅದನ್ನು ಮುಂದುವರೆಸಿಕೊಂಡು ಹೋಗುವುದಕ್ಕೆ ಸರ್ಕಾರಕ್ಕೆ ಇಷ್ಟ ಇದೆಯೇ?

ಶ್ರೀ ಬೇಗಾನೆ ರಾಮಯ್ಯ.—೧೯೭೯ಕ್ಕಿಂತ ಮುಂಚಿತವಾಗಿ ಬೇರೆ ವ್ಯವಸ್ಥೆ ಇತ್ತು. ಅದು ಅವರಿಗೆ ಗೊತ್ತಿದೆ, ಅಲ್ಲಿ ಆದಂಥ ಕಲೆಕ್ಷನ್‌ನಲ್ಲಿ ೩೦ ಭಾಗ ಪಂಚಾಯಿತಿಗೂ, ೫೦ ಭಾಗ ತಾಲ್ಲೂಕು ಬೋರ್ಡಿಗೂ, ಇನ್ನು ೧೦-೧೦ ಭಾಗ ಡಿವಿಷನಲ್ ಕಮಿಷನರ್‌ಗೆ ಕೊಡತಕ್ಕ ವ್ಯವಸ್ಥೆ ಇತ್ತು. ೧೯೭೯ರಿಂದಿಚೆಗೆ ಪಂಚಾಯಿತಿಗಳಿಗೆ ಆರ್ಥಿಕ ಸಂಪನ್ಮೂಲವನ್ನು ಹೆಚ್ಚು ಮಾಡಿಕೊಡಬೇಕೆಂಬ ದೃಷ್ಟಿಯಿಂದ ಉತ್ತೇಜನ ಕೊಡುವುದಕ್ಕೆ ಈ ರೀತಿ ವ್ಯವಸ್ಥೆ ಮಾಡಿಕೊಂಡು ಬಂದಿದ್ದೇವು. ವಸೂಲಿಯಲ್ಲಿ ಹಿಂದೆ ಬಿದ್ದಿದ್ದರಿಂದ ಒಂದು ಗಡುವನ್ನು ಹಾಕಿದ್ದೇವೆ. ಇದನ್ನು ಸದಸ್ಯರು ಒಪ್ಪಬಹುದೆಂದು ಭಾವಿಸಿದ್ದೇನೆ. ಮ್ಯಾಚಿಂಗ್ ಗ್ರಾಂಟ್ ಬರುತ್ತದೆಂದರೆ ೬ ಸಾವಿರ ರೂಪಾಯಿ ಕಲೆಕ್ಷನ್ ಮಾಡುವ ಕಡೆ ೧೦ ಸಾವಿರ ವಸೂಲಾಗುತ್ತದೆ. ೧೦೦ ರೂಪಾಯಿ ಕಲೆಕ್ಷನ್ ಆಗತಕ್ಕ ಪಂಚಾಯಿತಿ ವ್ಯವಸ್ಥೆಯೂ ಇದೆ. ಇದನ್ನು ಗಮನದಲ್ಲಿಟ್ಟುಕೊಂಡು ಪಂಚಾಯಿತಿಗಳಲ್ಲಿ ಕಾಂಪಿಟೆಷನ್ ಇರಬೇಕೆಂಬ ಉದ್ದೇಶದಿಂದ ಮಾಡಿದ್ದೇವೆ. ೫೦ ಪರ್ಸೆಂಟ್‌ಗಿಂತ ಹೆಚ್ಚು ಕಲೆಕ್ಷನ್ ಆದರ ಮ್ಯಾಚಿಂಗ್ ಗ್ರಾಂಟ್ ೧೦೦ಕ್ಕೆ ೧೨೦ರಷ್ಟು ಕೊಡುತ್ತೇವೆಂದರೆ ಅವರು ಹೆಚ್ಚು ಆಸಕ್ತಿ ವಹಿಸಿ ವಸೂಲಾತಿ ಮಾಡುತ್ತಾರೆಂಬ ಉದ್ದೇಶದಿಂದ ಮಾಡಿದ್ದೇವೆ. ಕೆಲವು ಗ್ರಾಮ ಪಂಚಾಯಿತಿಗಳು ಅತ್ಯಂತ ಪರಿಶ್ರಮ ಪಟ್ಟು ೧೦೦ಕ್ಕೆ ೧೨೦ರಷ್ಟು ಕಲೆಕ್ಷನ್ ಮಾಡು

ತ್ತಿವೆ. ನಾವು ಈ ರೀತಿ ಗಡುವು ಹಾಕುವುದರಿಂದ ಬೇರೆ ಪಂಚಾಯಿತಿಗಳೂ ಹೆಚ್ಚು ಹೆಚ್ಚು ವಸೂಲು ಮಾಡುವುದಕ್ಕೆ ಮುಂದೆ ಬರಬಹುದು ಎಂಬ ಉದ್ದೇಶವನ್ನು ಗಮನದಲ್ಲಿಟ್ಟುಕೊಂಡಿದ್ದೇವೆಯೇ ವಿನಃ ಅವರಿಗೆ ನಿರುತ್ಸಾಹವನ್ನುಂಟು ಮಾಡಬೇಕೆಂಬುದಿಲ್ಲ

ಶ್ರೀ ಬಿ. ವಿ. ಕಕ್ಕಿಲಾಯ —ಅವರು ಸರ್ಕಾರದ ಉದ್ದೇಶವನ್ನು ವಿವರಿಸಿದರು. ನಾವು ಅಂಕಿಸಂಖ್ಯೆಗಳನ್ನು ಇಟ್ಟುಕೊಂಡು ಮಾತನಾಡೋಣ. ಇಲ್ಲದಿದ್ದರೆ ಸಮಾಧಾನವಾಗುವುದಿಲ್ಲ. ಪಂಚಾಯಿತಿಗಳ ಮೂಲಕ ೨೫.೫೦.೦೦೦ ರೂಪಾಯಿ ವಸೂಲಾಗಿದೆ. ೮ ಸಾವಿರ ಗ್ರಾಮಪಂಚಾಯಿತಿಗಳಿಗೆ ಕೊಟ್ಟಿರುವುದು ೫೦ ಲಕ್ಷ ರೂಪಾಯಿಗಳು. ಇದಕ್ಕಿಂತ ಹೆಚ್ಚಾಗಿ ಕೊಟ್ಟಿಲ್ಲ ಇಲ್ಲಿ ಪ್ರಶ್ನೆ ಏನೆಂದರೆ ವಸೂಲು ಮಾಡುವ ಜವಾಬ್ದಾರಿ ಪಂಚಾಯಿತಿಗಳಿಗಿಲ್ಲ. ಗ್ರಾಮ ಸೇವಕರು ಸರ್ಕಾರದ ಅಧೀನದಲ್ಲಿರುವವರು. ಅವರು ಸರಿಯಾಗಿ ವಸೂಲು ಮಾಡುವುದಿಲ್ಲ. ಅವರಿಗೆ ಎರಡೆರಡು ಕೆಲಸ ಕೊಟ್ಟಿದ್ದೀರಿ. ಅವರು ರೆವಿನ್ಯೂ ಅಧಿಕಾರಿ ಕೆಲಸ. ಪಂಚಾಯಿತಿ ಸೆಕ್ರೆಟರಿ ಕೆಲಸ ಎರಡೂ ಮಾಡುವುದಕ್ಕಾಗುವುದಿಲ್ಲ. ಪಂಚಾಯಿತಿ ಕೆಲಸ ಮಾಡುವುದಿಲ್ಲ. ಆದ್ದರಿಂದ ಇವರು ವಸೂಲು ಮಾಡುವುದಕ್ಕಾಗುವುದಿಲ್ಲ. ಪಂಚಾಯಿತಿಗಳಲ್ಲಿ ಚುನಾವಣೆಯಾದ ಅಧ್ಯಕ್ಷರಿರಿ. ಸದಸ್ಯರು ಇರುತ್ತಾರೆ. ಜನ ಇವರ ಕುತ್ತಿಗೆ ಹಿಡಿಯುತ್ತಾರೆ. ಪಂಚಾಯಿತಿಗಳು ಕೆಲಸ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ಈ ವ್ಯವಸ್ಥೆಯಿಂದಾಗಿ ಪಂಚಾಯಿತಿಗಳು ಕೆಲಸ ಮಾಡುವುದು ಕಷ್ಟವಾಗಿದೆ. ಗ್ಯಾರಂಟಿ ಕೊಡುವುದನ್ನು ಕೊಟ್ಟು ವಸೂಲು ಮಾಡುವುದಕ್ಕೆ ಸಿಬ್ಬಂದಿ ನೇಮಕ ಮಾಡಿಕೊಳ್ಳುವುದಕ್ಕೆ ಅವಕಾಶ ಮಾಡಿಕೊಡಿ. ಈ ಬಗ್ಗೆ ಸರ್ಕಾರದವರು ಯೋಚನೆ ಮಾಡುತ್ತೀರಾ?

ಶ್ರೀ ಪೆಚ್. ಎಲ್. ತಿಮ್ಮೇಗೌಡ —ಇಲ್ಲಿ ವಸೂಲು ಮಾಡತಕ್ಕ ತೆರಿಗೆಗಳಲ್ಲಿ ಎರಡು ತರಹ ಇದೆ. ಹಿಂದು ಲ್ಯಾಂಡ್ ರೆವಿನ್ಯೂನಲ್ಲಿ ೫೦ ಪರ್ಸೆಂಟ್ ತಾಲ್ಲೂಕು ಬೋರ್ಡಿಗೆ ಕೊಡುವ ಪದ್ಧತಿ ಇದ್ದು ಪಂಚಾಯಿತಿಯಲ್ಲಿ ವಸೂಲಾಗತಕ್ಕ ಮನೆಗಂದಾಯ ಪೂರ್ತಿಯಾಗಿ ಪಂಚಾಯಿತಿಗೆ ಹೋಗಬೇಕು. ವಿಲೇಜ್ ಅಕೌಂಟೆಂಟರು ಕಂದಾಯ ವಸೂಲು ಮಾಡುವುದರ ಜೊತೆಗೆ ಇದನ್ನೂ ಮಾಡುವಾಗ ಸರ್ಕಾರದ ಕಂದಾಯ ವಸೂಲು ಮಾಡುತ್ತಾರೆಯೇ ಹೊರತು ಗ್ರಾಮ ಪಂಚಾಯಿತಿಯ ಮನೆ ಕಂದಾಯಂ ವಸೂಲು ಮಾಡುತ್ತಿಲ್ಲ ಮಾನ್ಯ ಮಂತ್ರಿಗಳು ಮನೆಗಂದಾಯ ವಸೂಲು ಮಾಡಿದ ಮೇಲೆ ಮ್ಯಾಚಿಂಗ್ ಗ್ರಾಂಟ್ ಕೊಡುತ್ತೇವೆ ಎಂದರೆ ಆಗುವುದಿಲ್ಲ. ಪಾಚಾಯಿತಿ ಅಧ್ಯಕ್ಷರು ಹೋಗಿ ಮನೆಗಂದಾಯ ಕೇಳಿದರೆ ಅವರ ತಲೆ ಹೊಡೆಯುತ್ತಾರೆ. ಸರ್ಕಾರೀ ಅಧಿಕಾರಿಗಳು ಲ್ಯಾಂಡ್ ರೆವಿನ್ಯೂ ಜೊತೆಗೆ ಮನೆ ಕಂದಾಯ ವಸೂಲು ಮಾಡಿದರೆ ೧೦೦ಕ್ಕೆ ೧೦೦ ಕಲೆಕ್ಷನ್ ಆಗುತ್ತದೆ. ಆದ್ದರಿಂದ ಪಂಚಾಯಿತಿ ಅಧ್ಯಕ್ಷರು ಮತ್ತು ಸದಸ್ಯರ ಮೇಲೆ ಜವಾಬ್ದಾರಿ ಹಾಕಿ ಇವರನ್ನು ಪೀನಲೈಸ್ ಮಾಡುವ ಬದಲು ಗ್ರಾಮ ಲೆಕ್ಕಿಗರ ಮೇಲೆ ಜವಾಬ್ದಾರಿ ಹಾಕಬೇಕು. ಇವರು ಮಾಡುವ ತಪ್ಪಿಗೆ ಪಂಚಾಯಿತಿಯನ್ನು ಪೀನಲೈಸ್ ಮಾಡುವುದು ಸರಿಹೋಗುವುದಿಲ್ಲ. ಆದ್ದರಿಂದ ಮಂತ್ರಿಗಳು ತಮ್ಮ ನಿಲುವನ್ನು ಬದಲಾಯಿಸಬೇಕು ಎಂದು ಪ್ರಾರ್ಥಿಸಿಕೊಳ್ಳುತ್ತೇನೆ.

ಶ್ರೀ ಬೇಗಾನೆ ರಾಮಯ್ಯ —ಕಳೆದ ಅಧಿವೇಶನದಲ್ಲಿ ಹಿಂದೆ ಇದ್ದಂಥ ಅಧಿಕಾರವನ್ನು ಎಲ್ಲಾ ಗ್ರಾಮಪಂಚಾಯಿತಿ ಅಧ್ಯಕ್ಷರಿಗೆ ಕೊಟ್ಟಿದ್ದರು. ಗ್ರಾಮಪಂಚಾಯಿತಿ ಪಾಪ್ತಿಯಲ್ಲಿ ಬರತಕ್ಕ ಖಾಲಿ ನಿವೇಶನಗಳ ಮೇಲೆ, ಮನೆಗಳ ಮೇಲೆ ಕರ ಹಾಕಿ [ಪಂಚಾಯಿತಿಯ ತೆರಿಗೆ ಹೆಚ್ಚು ಮಾಡಿಕೊಳ್ಳಿ ಎಂದರೆ ಯಾರೂ ಮಾಡಲಿಲ್ಲ. ನಿನ್ನೆ ರಿಂದ ಕಳೆದ ಅಧಿವೇಶನದಲ್ಲಿ ತಿದ್ದುಪಡಿ ಮಾಡುವವರೆಗೂ ಯಾರೂ ಕೈ ಹಾಕಲಿಲ್ಲ. ಪಂಚಾಯಿತಿ ಖರಿಯಾದಲ್ಲಿ ಜಾಸ್ತಿ ಮಾಡಿದರೆ ಚುನಾವಣೆ ಸಮಯದಲ್ಲಿ ತೊಂದರೆಯಾಗಬಹುದು ಎಂಬ ದೃಷ್ಟಿಯಿಂದ ಹಾಗೆ ಮಾಡಿರಬಹುದು. ಹಾಗೆ ಮಾಡಿದನ್ನು ಗಮನಿಸಿ ಹೋದ ವರ್ಷ ತಿದ್ದುಪಡಿ ತಂದು ಖಾಲಿ ನಿವೇಶನಗಳ ಮೇಲೆ ಮನೆಗಳ ಮೇಲೆ ಕರ ಜಾಸ್ತಿ ಮಾಡುವ ಅಧಿಕಾರವನ್ನು ತಹಸೀಲ್ದಾರರಿಗೆ ಕೊಟ್ಟು ಅಸೆಸರ್ ನೇಮಕ ಮಾಡಿಕೊಂಡು ಮನೆ ಕಂದಾಯ ಮತ್ತು ನಿವೇಶನಗಳ ಕಂದಾಯವನ್ನು ವಸೂಲು ಮಾಡಲಿಕ್ಕೆ ಈಗಾಗಲೇ ಅವಕಾಶ ಕಲ್ಪಿಸಿದ್ದೇವೆ. ಈ ಸಾರಿ ಗ್ರಾಮ ಪಂಚಾಯಿತಿಗಳಲ್ಲಿ ತೀವ್ರ ಗತಿಯಿಂದ ಕಂದಾಯ ವಸೂಲಾಗುತ್ತಿದೆ. ಆ ದೃಷ್ಟಿಯಿಂದ ಗಮನಿಸಿ ಇದನ್ನು ಮಾಡುತ್ತಿದ್ದೇವೆ. ಮಾನ್ಯ ಕಕ್ಕಿಲಾಯ ಅವರು ಮಾತನಾಡುತ್ತಾ, ಗ್ರಾಮ ಪಂಚಾಯಿತಿಯವರು ವಸೂಲಿ ಮಾಡಿದ್ದು ಎರಡು ಕೋಟಿ ರೂಪಾಯಿಗಳಾದರೆ, ಅವುಗಳಿಗೆ ಕೊಟ್ಟಿದ್ದು ಐವತ್ತು ಲಕ್ಷ ರೂಪಾಯಿಗಳೆಂದು ಹೇಳಿದರು. ಮಾನ್ಯ ಜಯ ದೇವರಾಜ ಅರಸ್ ಅವರು ಕೇಳಿದ ಪ್ರಶ್ನೆಗೆ, ಮೂರು

ತಿಂಗಳ ಲೆಕ್ಕ ಹಾಕಿ ೫೦ ಲಕ್ಷ ರೂಪಾಯಿಗಳನ್ನು ಗ್ರಾಮ ಪಂಚಾಯತಿಗಳಿಗೆ ಸಮ ಪೊತ್ತದ ಅನುದಾನ ಗಳನ್ನು ನೀಡಲು ಹಂಚಿಕೆ ಮಾಡಿರುವ ಒಟ್ಟು ಪೊತ್ತವೆಂದು ಹೇಳಲಾಗಿದೆ. ಅದಲ್ಲದೆ, matching amount ಆಗಿ ೫೦ ಲಕ್ಷ ರೂಪಾಯಿಗಳನ್ನು ೧೯೮೦-೮೧ರಲ್ಲಿ ಬಿಡುಗಡೆ ಮಾಡುತ್ತಿದ್ದೇವೆ. ಈ ಬಗ್ಗೆ ಇನ್ನೂ ೪೦ ಲಕ್ಷ ರೂಪಾಯಿಗಳು ಬೇಕೆಂದು ಮಾನ್ಯ ಆರ್ಥ ಸಚಿವರಿಗೆ ಬೇಡಿಕೆ ಕೊಟ್ಟಿದ್ದೇವೆ. ಆದ್ದರಿಂದ, ಈಗ ನೀಡಿರುವ ೫೦ ಲಕ್ಷ ರೂಪಾಯಿಗಳು ಸಾಲದೆಂದು ಹೇಳುತ್ತಿರುವುದರ ಬಗ್ಗೆ ತೀವ್ರವಾಗಿ ಕ್ರಮ ಕೈಗೊಳ್ಳಲಾಗುವುದು. ಗ್ರಾಮ ಪಂಚಾಯತಿಗಳು ಪ್ರಜಾಪ್ರಭುತ್ವದ ಬುನಾದಿ. ಅವುಗಳನ್ನು ಕಾಪಾಡುವುದು ನಮ್ಮ ಧರ್ಮ, ಕಾಪಾಡುತ್ತೇವೆ.

ಶ್ರೀ ಡಿ. ಜಯದೇವರಾಜ ಅರಸ್.—ಮಾನ್ಯ ಸಚಿವರು ಒಂದನ್ನು ಜ್ಞಾಪಕದಲ್ಲಿ ಇಟ್ಟುಕೊಳ್ಳಬೇಕು. ಈ ಬಗ್ಗೆ ಹಿಂದಿನ ಸರ್ಕಾರ ಮಾಡಿದ್ದ ಆದೇಶದಿಂದ ನೂರು ಮೈಲಿ ಮುಂದಕ್ಕೆ ಹೋಗುವುದರ ಬದಲು ನೂರು ಮೈಲಿ ಹಿಂದಕ್ಕೆ ಹೋಗುತ್ತಿದ್ದೀರಿ. ಹೀಗೆ ಮಾಡುವುದು ಸರಿಯಾದ ಕೆಲಸವಲ್ಲ. ಇದರಿಂದ ಪಂಚಾಯತಿಗಳು ತಮ್ಮ ಯಾವತ್ತೂ ಕೆಲಸಗಳನ್ನು ಮಾಡುವುದಕ್ಕಾಗುವುದಿಲ್ಲ, ಆದುದರಿಂದ ಮಾನ್ಯ ಸಚಿವರು ಇದರ ಬಗ್ಗೆ ಒಂದು ಖಚಿತವಾದ ಉತ್ತರವನ್ನು ಕೊಡುವುದರ ಜೊತೆಗೆ ಇದನ್ನು ಪುನರ್ ಪರಿಶೀಲನೆ ಮಾಡಬೇಕೆಂದು ಪ್ರಾರ್ಥಿಸುತ್ತೇನೆ.

ಶ್ರೀ ಬೇಗಾನೆ ರಾಮಯ್ಯ.—ಮಾನ್ಯ ಸದಸ್ಯರುಗಳಿಗೆ ಎಷ್ಟು ಕಳಕಳಿ ಇದೆಯೋ ಸರ್ಕಾರಕ್ಕೂ ಕೂಡ ಅಷ್ಟೇ ಕಳಕಳಿ ಇದೆ. ಪಂಚಾಯತಿಗಳ ಸಂಪನ್ಮೂಲವನ್ನು ಜಾಸ್ತಿ ಮಾಡುವುದಕ್ಕೆ ಸಾಧ್ಯವಾದ ಎಲ್ಲಾ ಕಾರ್ಯಕ್ರಮಗಳನ್ನು ಹಾಕಿಕೊಂಡು, ಆಸಕ್ತಿ ವಹಿಸಿ, ಅವುಗಳಿಗೆ ಯಾವ ರೀತಿಯಲ್ಲಿ ಸಹಾಯ ಮಾಡಬೇಕೆಂದು ನಾನು ಪ್ರಯತ್ನ ಮಾಡುತ್ತಿದ್ದೇನೆ. ಕೆಲವು ಭಾಗಗಳಲ್ಲಿ ಜಿಲ್ಲಾಧಿಕಾರಿಗಳಿಗೆ ಕೊಟ್ಟಿರುವ ಡಿಸ್ಕ್ರೆಷನರಿ ಅಧಿಕಾರವನ್ನು ಬದಲಾಯಿಸಬೇಕೆಂದು ಕೆಲವು ಸದಸ್ಯರು ಸಲಹೆ ಮಾಡಿದ್ದಾರೆ, ಅದನ್ನು ನಾನು ಪರಿಶೀಲನೆ ಮಾಡುತ್ತೇನೆ.

Registration of documents in Bangalore City Sub Registry Offices

564 SRI P. RAMDEV (Malleswaram).— Will the Minister for Revenue be pleased to state.—

(a) the number of papers that were registered in the Office of the Sub-Registrar, Bangalore City since last 6 months ;

(b) out of these number of papers, connected with sites ;

(c) the number of papers that were registered in "Gunte" account;

(d) the number of papers that were registered in connection with the buildings ?

SRI MALLIKARJUNA M. KHARGE (Minister for Revenue).—

(a) 34,126
(b) 14,504
(c) 14,703
(d) 5,549

ಶ್ರೀ ಪಿ. ರಾಮದೇವ್.— ಸ್ವಾಮಿ, ಮಾನ್ಯ ಸಚಿವರು ನೀಡಿರುವ ಉತ್ತರದ ಪ್ರಕಾರ ಬೆಂಗಳೂರು ನಗರದಲ್ಲಿ ಸಬ್ ರಿಜಿಸ್ಟ್ರಾರ್ ಕಛೇರಿಯಲ್ಲಿ ಕಳೆದ ಆರು ತಿಂಗಳಿನಲ್ಲಿ ರಿಜಿಸ್ಟ್ರಾರ್ ಆದ ಪತ್ರ, ಗಳ ಸಂಖ್ಯೆಯಿಲ್ಲಿ.೧೨೬. ಅಂದರೆ. ಎರಡು ನಿಮಿಷಗಳಿಗೊಂದು ಪತ್ರ ರಿಜಿಸ್ಟರ್ ಆದಂತಾಯಿತು. ಇದರಿಂದ ಸಬ್ ರಿಜಿಸ್ಟ್ರಾರ್ ಕಛೇರಿಯಲ್ಲಿ ಎಷ್ಟು ದಕ್ಷತೆಯಿಂದ ಕೆಲಸ ಮಾಡುತ್ತಿದ್ದಾರೆಂದು ಗೊತ್ತಾಗುತ್ತದೆ. ಆಲ್ಲಿ ಬಿ.ಡಿ.ಎ ನಿವೇಶನಗಳನ್ನು ರಿಜಿಸ್ಟರ್ ಮಾಡಿಕೊಳ್ಳುತ್ತಾರೆ. ಸರ್ಕಾರದ ನಿವೇಶನಗಳನ್ನು ರಿಜಿಸ್ಟರ್ ಮಾಡಿಕೊಳ್ಳುತ್ತಾರೆ. ಇದಕ್ಕೆ ಕಾರಣವೇನು ?